# II Semester B.Com. Examination, May/June 2013
## (Fresh) (2012-13 and onwards)
## COMMERCE
## Paper – 2.3 : Advanced Financial Accounting

Time : 3 Hours | Max. Marks : 100

***Instruction :*** *Answers should be written completely either in* ***English*** *or in* ***Kannada****.*

SECTION – A

Answer **any 10** sub questions from the following. **Each** sub question carries **2** marks. **(10×2=20)**

1. a) What is fire insurance claims ?

   b) Define accounting standards.

   c) Mention two features of independent branches.

   d) What is average clause ? When it is applicable ?

   e) Mention any two objectives of branch accounts.

   f) What is consignment ?

   g) What is an account sales ?

   h) Give the meaning of Joint venture.

   i) What is normal loss in consignment ? How it is treated ?

   j) Kolar H.O. sends goods to its K.G.F. branch at a profit of 20 % on cost, of the H.O. sends goods for Rs. 1,00,000. Calculate the cost price.

   k) What is a memorandum joint venture account ? Why it is prepared ?

   l) What are the two methods of accounting of amalgamation as per A.S. 14 ?



15

SECTION – B

Answer **any four** of the following. **Each** question carries **8** marks. **(4×8=32)**

2. What are the objectives and functions of Accounting Standards Board ?

3. Ravi of Bangalore sent a consignment of 2000 articles to his agent Sridhar of Kolar at Rs. 20 per article. Railway charges, cartage and Insurance amounted to 10 % of total cost of goods. Sridhar sold 2000 articles at Rs. 30 each and sent an account sales enclosing a bank draft for the balance after deducting
   a) his advance of Rs. 5,000
   b) his expenses Rs. 500 and
   c) his commission at 10 % of Gross sales.

   Pass the necessary Journal Entries in the books of Ravi of Bangalore.

4. Veena and Meena entered into a joint venture sharing profits and losses in the ratio of 3 : 2. Veena contributed Rs. 60,000 and Meena Rs. 80,000. The amounts contributed by them were deposited into a joint bank account. They bought goods for cash Rs. 1,00,000 and from Veena for Rs. 40,000. They paid for carriage Rs. 7,000, Rent Rs. 2,000, insurance Rs. 3,000 and other expenses Rs. 4,000. All the goods were sold for Rs. 1,80,000.

   Pass the Necessary Journal Entries.

5. Fire occurred in the premises of Ramesh on 31-10-2012. All the stocks were destroyed except to the extent of Rs. 2,800. From the following details ascertain the claim to be Lodged by Ramesh.

   Final account of Ramesh were prepared on 31-12-2011 :

| | |
|---|---|
| Sundry creditors on 31-12-2011 were | 25,000 |
| Sundry creditors on 31-10-2012 were | 20,000 |
| Stock on 31-12-2011 was | 15,000 |
| Sales from 1-01-2012 to 30-10-2012 | 1,34,000 |
| Payments to creditors | 1,30,000 |

   Normal rate of gross profit on sales is 20 %.

6. Journalise the following transactions in the books of Head Office.
   a) Goods sent by the head office on 28th December worth Rs. 10,000 to Mulbagal branch were not received by the branch upto 31st December.
   b) Rs. 2,000 interest on investments collected by Mulbagal branch on behalf of the head office.
   c) K.G.F. branch has received Rs. 5,000 on account of interest on deposits of head office with their parties.
   d) Head office has received Rs. 1,00,000 as payment from branch debtors.

e) Branch creditors have been paid by the H.O. to the extent of Rs. 10,000.

f) A sum of Rs. 25,000 being arrears of call money was received by the branch from a share holder in November but was not communicated to the head office till 3rd January.

g) Cash remitted to branch on 30th December but received on 5th January Rs. 50,000.

h) Goods valued at Rs. 25,000 were transferred from KGF to Mulbagal branch under instruction from Head Office.

SECTION – C

Answer **any three** of the following. **Each** question carries **16** marks. **(3×16=48)**

7. A fire occurred on October 1st 2012 and destroyed the stock of a firm, the business records were saved and the following particulars are available.

| | **Rs.** |
|---|---|
| Stock at cost on 01-04-2011 | 44,300 |
| Stock at cost on 31-03-2012 | 37,550 |
| Purchases for the year up to 31-03-2012 | 1,03,850 |
| Sales for the year 31-03-2012 | 1,52,500 |
| Purchases from 01-04-2012 to 30-09-12 | 37,350 |
| Sales from 01-04-2012 to 30-09-2012 | 59,000 |

In valuing the stock on 31-03-2012 Rs. 800 had been written off a particular line of goods which had originally cost Rs. 1,800 and which were sold in June 2012 for Rs. 1,750. Except this transaction the rate of Gross Profit had remained uniform throughout. The value of stock salvaged from the fire was Rs. 5,105.

You are required to calculate the amount of claim.

8. Amco Batteries Ltd. Bangalore consigned 1,500 Batteries costing Rs. 5,000 each, to Manju Electricals of Mulbagal. The consignor paid Rs. 75,000 towards Freight charges and insurance Rs. 30,000. During transit it was found that 10 Batteries were damaged and insurance company settled the claim for Rs. 45,000. Manju Electricals received the balanced consigned goods and paid unloading charges Rs. 14,900. They accepted a bill drawn for Rs. 20,00,000 as advance. Manju Electricals sold 800 Batteries for cash at Rs. 6,500 and 450 batteries on credit at Rs. 7,000 each. They spent Rs. 42,000 for Godown Rent, Rs. 6,500 for advertisement and Rs. 30,000 as salesmen salary. The consignee entitled to get an ordinary commission at 5 % on sales and Del credere commission at 2 % on credit sales. Manju Electricals remit the balance due to the consignor by bank draft.
Prepare (a) Consignment A/c (b) Consignee A/c (c) Abnormal Loss A/c.

9. Rajesh, Satish and Mahesh Entered into a joint venture according to which Rajesh and Satish purchase goods and send the same to Mahesh who is a marketer. Mahesh would sell the goods for a commission of 10 % Rajesh and Satish agreed to share the remaining profit in the ratio of 3 : 2. Rajesh purchased goods for Rs. 1,00,000 and sent them to Mahesh incurring an Expenditure of Rs. 4,000. Satish purchased goods for Rs. 60,000 and sent the same to Mahesh by incurring an Expenditure of Rs. 3,000.

   Mahesh Exported all the goods and realised Rs. 2,00,000, by paying Rs. 1,000 as insurance premium. He also received Rs. 8,000 as insurance compensation for some goods destroyed.

   Mahesh paid the balance of cash to Rajesh and Satish.

   Prepare : a) Memorandum Joint venture account

   b) Co-venturers accounts.

10. Bangalore H.O. of a company invoices goods to its Kolar branch at cost + 20 %. The branch also purchases independently from Local parties for which payments are made by H.O. All cash collections of the day is remitted by H.O. through a bank account and all Expenses of the branch are directly paid by H.O.

    From the following show the Kolar branch A/c in Head Office books.

| | | Rs. |
|---|---|---|
| Imprest cash | 01-01-2012 | 20,000 |
| | 31-12-2012 | 18,500 |
| Debtors on | 01-01-2012 | 2,50,000 |
| Stock on 01-01-2012 | | |
| Transferred from H.O. at invoice price | | 2,40,000 |
| Direct purchases by branch | | 1,60,000 |
| Total sales | | 17,50,000 |
| Cash sales | | 4,50,000 |
| Returns from customers | | 30,000 |
| Direct purchase | | 4,50,000 |
| Goods sent to branch from H.O. | | 6,00,000 |
| Transfer from H.O. for petty Cash Exp. | | 25,000 |
| Bad debts | | 10,000 |
| Discount to customers | | 20,000 |
| Cash received from customers | | 12,50,000 |
| Branch Expenses | | 3,00,000 |
| Stock on 31-12-2012 | | |
| Directly purchased by branch | | 1,20,000 |
| Transferred from H.O. at Invoice price | | 1,80,000 |

## ಕನ್ನಡ ಆವೃತ್ತಿ

### ವಿಭಾಗ - ಎ

ಕೆಳಗಿನ ಯಾವುದಾದರೂ **ಹತ್ತು** ಉಪಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಎರಡು** ಅಂಕಗಳು. **(10×2=20)**

1. a) ಬೆಂಕಿ ವಿಮೆಯ ಪರಿಹಾರ ಎಂದರೇನು ?
   b) ಲೆಕ್ಕಾಚಾರ ಮೌಲ್ಯಗಳನ್ನು ವ್ಯಾಖ್ಯಾನಿಸಿ.
   c) ಸ್ವಾವಲಂಬಿ ಶಾಖೆಗಳ ಎರಡು ಲಕ್ಷಣಗಳನ್ನು ಹೆಸರಿಸಿ.
   d) 'ಸರಾಸರಿ ಕಲಮು' ಎಂದರೇನು ? ಇದನ್ನು ಎಲ್ಲಿ ಉಪಯೋಗಿಸುತ್ತೀರಿ ?
   e) ಶಾಖೆಗಳ ಲೆಕ್ಕದ ಎರಡು ಲಕ್ಷಣಗಳನ್ನು ಬರೆಯಿರಿ.
   f) ''ಸರಕು ಕಳುಹಿಸುವುದು'' ಎಂದರೇನು ?
   g) 'ಮಾರಾಟದ ಲೆಕ್ಕ' ಎಂದರೇನು ?
   h) ಜಂಟಿ ಮಾರಾಟದ ಒಪ್ಪಂದ ಅರ್ಥವನ್ನು ಬರೆಯಿರಿ.
   i) ಸರಕು ಕಳುಹಿಸುವಿಕೆ ಮಾರಾಟದಲ್ಲಿ ಸಾಮಾನ್ಯ ನಷ್ಟ ಎಂದರೇನು ? ಅದನ್ನು ಹೇಗೆ ಪರಿಗಣಿಸುತ್ತೀರಿ ?
   j) ಕೋಲಾರದಲ್ಲಿ ಪ್ರಧಾನ ಕಛೇರಿಯಿರುವ ಒಂದು ಕಂಪನಿಯು ತನ್ನ ಕೆ.ಜಿ.ಎಫ್. ಶಾಖೆಗೆ ಸರಕನ್ನು ಅಸಲಿನ ಮೇಲೆ ಶೇ. 20 % ರಂತೆ ಲಾಭದಲ್ಲಿ ಕಳುಹಿಸಿದರು. ಪ್ರಧಾನ ಕಛೇರಿಯು ರೂ. 1,00,000 ಮೌಲ್ಯದ ಸರಕನ್ನು ಕಳುಹಿಸಿದರು. ಅಸಲಿ ಬೆಲೆಯನ್ನು ಕಂಡುಹಿಡಿಯಿರಿ.
   k) ''ಮೆಮೋರೆಂಡಮ್'' ಜಂಟಿ ಖಾತೆ ಎಂದರೇನು ? ಅದನ್ನು ಏಕೆ ತಯಾರಿಸುತ್ತಾರೆ ?
   l) ಲೆಕ್ಕಚಾರ ಮೌಲ್ಯ 14 ರ ಪ್ರಕಾರ ಕಂಪನಿಯ ಸಂಯೋಜನೆಯ ಎರಡು ಲೆಕ್ಕಚಾರ ವಿಧಗಳನ್ನು ತಿಳಿಸಿ.

### ವಿಭಾಗ - ಬಿ

ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **8** ಅಂಕಗಳು. **(4×8=32)**

2. ಲೆಕ್ಕಚಾರ ಮೌಲ್ಯಗಳ ಬೋರ್ಡಿನ ಉದ್ದೇಶ ಮತ್ತು ಕಾರ್ಯಗಳನ್ನು ತಿಳಿಸಿ.

3. ಬೆಂಗಳೂರಿನ ರವಿಯವರು ಕೋಲಾರದ ಅವರ ಪ್ರತಿನಿಧಿಯಾದ ಶ್ರೀಧರ ಎಂಬುವರಿಗೆ ಪ್ರತಿಯೊಂದು ಪದಾರ್ಥಕ್ಕೆ ರೂ. 20 ರಂತೆ 2,000 ಪದಾರ್ಥಗಳ ಸರಕು ರವಾನೆ ಮಾಡಿದರು. ರೈಲ್ವೆ ಖರ್ಚುಗಳು, ಗಾಡಿ ಬಾಡಿಗೆ ಮತ್ತು ವಿಮೆ ಒಟ್ಟು ಖರೀದಿ ಬೆಲೆಯ ಶೇ 10 ರಷ್ಟಾಗಿತ್ತು. ಶ್ರೀಧರರವರು 2,000 ಪದಾರ್ಥಗಳನ್ನು 30 ರೂ. ನಂತೆ ಮಾರಿದರು ಮತ್ತು (a) ಅವನ ಮುಂಗಡ ಹಣ ರೂ. 5,000 (b) ಅವನ ಖರ್ಚುಗಳು ರೂ. 500 (c) ಅವನ ದಲ್ಲಾಳಿ ಒಟ್ಟು ಮಾರಾಟದ ಮೇಲೆ ಶೇ. 10 ರಷ್ಟನ್ನು ಕಳೆದುಕೊಂಡು ಬಾಕಿ ಹಣವನ್ನು ಒಂದು ಬ್ಯಾಂಕ ಡ್ರಾಫ್ಟನ್ನು ಮಾರಾಟದ ಲೆಕ್ಕದೊಂದಿಗೆ ಕಳುಹಿಸಿದನು.

   ರವಾನೆದಾರರ ಪುಸ್ತಕದಲ್ಲಿ ರೋಜು ದಾಖಲೆ ಬರೆಯಿರಿ.

4. ವೀಣಾ ಮತ್ತು ಮೀನರವರು ಲಾಭ ಮತ್ತು ನಷ್ಟವನ್ನು 3 : 2, ಪ್ರಮಾಣದಲ್ಲಿ ಹಂಚಿಕೊಳ್ಳುವ ಒಂದು ಜಂಟಿ ಮಾರಾಟ ಒಪ್ಪಂದಕ್ಕೆ ಸಹಿ ಹಾಕಿದರು. ವೀಣಾರವರು ರೂ. 60,000 ಮತ್ತು ಮೀನರವರು ರೂ. 80,000 ನೀಡಿದರು. ಈ ನಗದನ್ನು ಜಂಟಿ ಬ್ಯಾಂಕ್ ಖಾತೆಗೆ ಜಮಾ ಮಾಡಿದರು. ಅವರು ರೂ. 1,00,000 ಸರಕನ್ನು ಖರೀದಿಸಿದರು ಮತ್ತು ವೀಣಾರವರು ರೂ. 40,000 ಬೆಲೆ ಬಾಳುವ ಸರಕನ್ನು ನೀಡಿದರು. ಅವರು ಸಾಗಾಣಿಕೆ ವೆಚ್ಚ ರೂ. 7,000, ಬಾಡಿಗೆ ರೂ. 2,000, ವಿಮೆ ರೂ. 3,000 ಮತ್ತು ಇತರೆ ಖರ್ಚುಗಳು ರೂ. 4,000 ಖರ್ಚು ಮಾಡಿದರು. ಎಲ್ಲಾ ಸರಕನ್ನು ರೂ. 1,80,000 ಕ್ಕೆ ಮಾರಿದರು.
ಅಗತ್ಯವಾದ ರೋಜು ದಾಖಲೆ ಬರೆಯಿರಿ.

5. ರಮೇಶರವರು ದಾಸ್ತಾನು ಶೇಖರಿಸಿದ್ದ ಉಗ್ರಾಣಕ್ಕೆ ದಿನಾಂಕ31-10-2012 ರಂದು ಬೆಂಕಿ ತಗುಲಿ ರೂ. 2,800 ಬೆಲೆಯ ಸರಕನ್ನು ಹೊರತು ಪಡಿಸಿ, ಉಳಿದೆಲ್ಲಾ ಸರಕು ನಾಶವಾಯಿತು. ಈ ಕೆಳಗಿನ ವಿವರಗಳಿಂದ ರಮೇಶರವರ ನಷ್ಟ ಪರಿಹಾರ ಬೇಡಿಕೆಯನ್ನು ಕಂಡು ಹಿಡಿಯಿರಿ. ರಮೇಶರವರ ಅಂತಿಮ ಲೆಕ್ಕವನ್ನು31-12-2011 ರಂದು ತಯಾರಿಸಲಾಗಿದೆ.

| | |
|---|---|
| ಚಿಲ್ಲರೆ ಸಾಲಿಗರು 31-12-2011 ರಂದು ಇದ್ದಂತೆ | ರೂ. 25,000 |
| ಚಿಲ್ಲರೆ ಸಾಲಿಗರು 31-10-2012 ರಂದು ಇದ್ದಂತೆ | ರೂ. 20,000 |
| ದಾಸ್ತಾನು 31-12-2011 ರಂದು ಇದ್ದಂತೆ | ರೂ. 15,000 |
| ಮಾರಾಟ 01-01-2012 ರಿಂದ30-10-12 ರವರೆಗೆ | ರೂ. 1,34,000 |
| ಸಾಲಿಗರಿಗೆ ಪಾವತಿಸಿದ್ದು | ರೂ. 1,30,000 |

ಸರಾಸರಿ ಸ್ಥೂಲ ಲಾಭ ಅನುಪಾತ ಮಾರಾಟ ಬೆಲೆಯ ಶೇ. 20.

6. ಪ್ರಧಾನ ಕಛೇರಿಯ ಪುಸ್ತಕಗಳಲ್ಲಿ ರೋಜು ನಮೂನೆಗಳನ್ನು ಬರೆಯಿರಿ.
   a) ದಿನಾಂಕ 28 ನೇ ಡಿಸೆಂಬರ್‌ರಂದು ಪ್ರಧಾನ ಕಛೇರಿಯು ಮುಳಬಾಗಲು ಶಾಖೆಗೆ ಕಳುಹಿಸಿದ ರೂ. 10,000 ಸರಕುಗಳು 31 ನೇ ಡಿಸೆಂಬರ್‌ವರೆಗೆ ತಲುಪಿಲ್ಲ.
   b) ಮುಳಬಾಗಲು ಶಾಖೆಯು ಹೂಡಿಕೆಗಳ ಬಡ್ಡಿಯನ್ನು ರೂ. 2,000 ಪ್ರಧಾನ ಕಛೇರಿಯ ಪರವಾಗಿ ಸ್ವೀಕರಿಸಿತು.
   c) ಕೆ.ಜಿ.ಎಫ್. ಶಾಖೆಯು ಪ್ರಧಾನ ಕಛೇರಿಯ ಭದ್ರತಾ ಠೇವಣಿಯ ಮೇಲಿನ ಬಡ್ಡಿಯನ್ನು ರೂ. 5,000 ಸ್ವೀಕರಿಸಿತು.
   d) ಪ್ರಧಾನ ಕಛೇರಿಯು ರೂ. 1,00,000 ಗಳನ್ನು ಶಾಖೆಯ ಸಾಲಗಾರರಿಂದ ವಸೂಲಾತಿ ಮಾಡಲಾಗಿದೆ.
   e) ಪ್ರಧಾನ ಕಛೇರಿಯು ಶಾಖೆಯ ಸಾಲಗಾರರಿಗೆ ರೂ. 10,000 ಗಳನ್ನು ಪಾವತಿಸಿದೆ.
   f) ಶಾಖೆಯು ರೂ. 25,000 ಕರಬಾಕಿಯನ್ನು ಷೇರುದಾರರಿಂದ ನವೆಂಬರ್‌ನಲ್ಲಿ ಸ್ವೀಕರಿಸಿದ್ದು ದಿನಾಂಕ 03 ರ ಜನವರಿಯವರೆಗೆ ಪ್ರಧಾನ ಕಛೇರಿಗೆ ತಿಳಿಸಿಲ್ಲ.
   g) ಪ್ರಧಾನ ಕಛೇರಿಯು ಶಾಖೆಗೆ 30 ನೇ ಡಿಸೆಂಬರ್‌ನಲ್ಲಿ ರೂ. 50,000 ಕಳುಹಿಸಿದ್ದು ಶಾಖೆಯು ಜನವರಿ 5 ನೇ ತಾರೀಖಿನಂದು ಸ್ವೀಕರಿಸಿದೆ.
   h) ರೂ. 25,000 ಬೆಲೆಯ ಸರಕುಗಳನ್ನು K.G.F. ಶಾಖೆಯಿಂದ ಮುಳಬಾಗಲು ಶಾಖೆಗೆ ಪ್ರಧಾನ ಕಛೇರಿಯ ನಿರ್ದೇಶನದಂತೆ ಕಳುಹಿಸಿದೆ.

## ವಿಭಾಗ - ಸಿ

ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 16 ಅಂಕಗಳು. (3×16=48)

7. ದಿನಾಂಕ 01-10-2012 ರಂದು ಒಂದು ಸಂಸ್ಥೆಯು ಬೆಂಕಿಗೆ ಆಹುತಿಯಾಯಿತು. ಆದರೆ ಬೇಕಾದ ಪುಸ್ತಕಗಳು ಉಳಿದು ಈ ಕೆಳಕಂಡ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

| | |
|---|---|
| 01-04-2011 ರಂದು ಸರಕು | ರೂ. 44,300 |
| 31-03-2012 ರಂದು ಸರಕು | ರೂ. 37,550 |
| 31-03-2012 ನೇ ವರ್ಷದ ಖರೀದಿಗಳು | ರೂ. 1,03,850 |
| 31-03-2012 ನೇ ವರ್ಷದ ಮಾರಾಟಗಳು | ರೂ. 1,52,500 |
| 01-04-2012 ರಿಂದ 30-09-2012 ರ ವರೆಗಿನ ಖರೀದಿಗಳು | ರೂ. 37,350 |
| 01-04-2012 ರಿಂದ 30-09-2012 ರ ವರೆಗಿನ ಮಾರಾಟಗಳು | ರೂ. 59,000 |

31-03-2012 ರಂದು ದಾಸ್ತಾನು ಮೌಲ್ಯ ಮಾಡುವಾಗ ಕಡಿಮೆ ಮಾರಾಟವಾಗುವ ಕಾರಣಕ್ಕಾಗಿ ರೂ. 800 ರಷ್ಟು ದಾಸ್ತಾನನ್ನು ವರ್ಜಿಸಲಾಗಿದೆ, ಅದರ ಮುಖ ಬೆಲೆ ರೂ. 1,800. ಜೂನ್ 2012 ರಲ್ಲಿ ಈ ದಾಸ್ತಾನನ್ನು ರೂ. 1,750 ಕ್ಕೆ ಮಾರಿದರು. ಈ ಮೇಲ್ಕಂಡ ಬದಲಾವಣೆಗಳನ್ನು ಹೊರತು ಪಡಿಸಿ ಸ್ಥೂಲ ಲಾಭ ಅನುಪಾತ ಸ್ಥಿರವಾಗಿರುತ್ತದೆ. ಬೆಂಕಿಯಲ್ಲಿ ಉಳಿದ ದಾಸ್ತಾನು ರೂ. 5,105. ನಷ್ಟಪರಿಹಾರ ಬೇಡಿಕೆಯನ್ನು ಕಂಡುಹಿಡಿಯಿರಿ.

8. ಆಮ್ಕೊ ಬ್ಯಾಟರಿಸ್ ಬೆಂಗಳೂರು ರವರು 1,500 ಬ್ಯಾಟರಿಗಳನ್ನು ತಲಾ ಒಂದಕ್ಕೆ ರೂ. 5,000 ರಂತೆ ತಮ್ಮ ಏಜೆಂಟರಾದ ಮಂಜು ಎಲೆಕ್ಟ್ರಿಕಲ್ ಮುಳಬಾಗಲುರವರಿಗೆ ಕಳುಹಿಸಿದರು. ಸಾಗಾಣಿಕೆ ವೆಚ್ಚ ರೂ. 75,000 ಮತ್ತು ವಿಮೆ 30,000 ಖರ್ಚು ಮಾಡಿದರು. ಸರಕು ಸಾಗಾಣಿಕೆಯಲ್ಲಿ 10 ಬ್ಯಾಟರಿಗಳು ನಾಶ ಹೊಂದಿದವು ಮತ್ತು ವಿಮೆ ಕಂಪೆನಿಯು ರೂ. 45,000 ಪರಿಹಾರ ನೀಡಿತು. ಮಂಜುರವರು ಉಳಿದ ಬ್ಯಾಟರಿಗಳನ್ನು ತೆಗೆದುಕೊಂಡು ಸರಕುಗಳನ್ನು ಇಳಿಸಲು ರೂ. 14,900 ಗಳನ್ನು ಖರ್ಚುಮಾಡಿದರು. ಮುಂಗಡ ಹಣವಾಗಿ ರೂ. 20,00,000 ಹುಂಡಿಯನ್ನು ನೀಡಿದರು. ಮಂಜುರವರು 800 ಬ್ಯಾಟರಿಗಳನ್ನು ನಗದಿಗೆ ರೂ. 6,500 ರೂ.ಗೆ ಒಂದರಂತೆ ಮತ್ತು 450 ಬ್ಯಾಟರಿಗಳನ್ನು ಸಾಲವಾಗಿ ರೂ. 7,000 ರೂ.ಗೆ ಒಂದರಂತೆ ಮಾರಿದರು. ಅದಕ್ಕೆ ಸಂಬಂಧಪಟ್ಟಂತೆ ಬಾಡಿಗೆ ರೂ. 42,000, ಜಾಹಿರಾತುಗಾಗಿ ರೂ. 6,500 ಮತ್ತು ಮಾರಾಟಗಾರನ ಸಂಬಳ ರೂ. 30,000 ಖರ್ಚುಮಾಡಿದರು. ಮಂಜುರವರು ಒಟ್ಟು ಮಾರಾಟದ ಮೇಲೆ 5 % ಮತ್ತು ಸಾಲ ಮಾರಾಟದ ಮೇಲೆ 2 % ರಷ್ಟು ಡೆಲ್ ಕ್ರೆಡಿರ್ ದಲ್ಲಾಳಿಗೆ ಅರ್ಹತೆ ಹೊಂದಿರುತ್ತಾರೆ. ಮಂಜುರವರು ಉಳಿಕೆ ಹಣಕ್ಕೆ ಬ್ಯಾಂಕ್ ಡ್ರಾಫ್ಟ್ ಕಳುಹಿಸುತ್ತಾರೆ. (a) ಸರಕು ರವಾನೆ ಖಾತೆ (b) ಸರಕು ರವಾನೆ ಪಡೆದವನ ಖಾತೆ (c) ಅಸಾಧಾರಣ ನಷ್ಟ ಖಾತೆಗಳನ್ನು ಸರಕು ರವಾನೆದಾರರ ಪುಸ್ತಕದಲ್ಲಿ ಬರೆಯಿರಿ.

9. ರಾಜೇಶ್, ಸತೀಶ್ ಮತ್ತು ಮಹೇಶ್‌ರವರು ಒಂದು ಜಂಟಿ ವ್ಯಾಪಾರಕ್ಕೆ ಸಹಿ ಹಾಕಿದರು. ಒಪ್ಪಂದದ ಪ್ರಕಾರ ರಾಜೇಶ್ ಮತ್ತು ಸತೀಶ್‌ರವರು ಸರಕುಗಳನ್ನು ಖರೀದಿಸಿ ಅದನ್ನು ವಿಕ್ರಯಗಾರನಾದ ಮಹೇಶ್‌ರವರಿಗೆ ಕಳುಹಿಸಬೇಕು. ಅದಕ್ಕೆ ಆತನಿಗೆ ಮಾರಾಟಕ್ಕೆ 10 % ಕಮಿಷನ್ ನೀಡುವುದು ಮತ್ತು ಉಳಿದ ಲಾಭವನ್ನು 3 : 2 ರಂತೆ ಹಂಚಿಕೊಳ್ಳಲು ಒಪ್ಪಿಕೊಂಡರು. ಅದರಂತೆ ರಾಜೇಶ್‌ರವರು ರೂ. 1,00,000 ಸರಕನ್ನು ಖರೀದಿಸಿ ಅದನ್ನು ಮಹೇಶ್‌ರವರಿಗೆ ಕಳುಹಿಸಿದರು ಅದಕ್ಕೆ ರೂ. 4,000 ಖರ್ಚುಮಾಡಿದರು. ಸತೀಶ್‌ರವರು ರೂ. 60,000 ಗಳ ಸರಕನ್ನು ಖರೀದಿಸಿ ಅದನ್ನು ಮಹೇಶ್‌ರವರಿಗೆ ಕಳುಹಿಸಿದರು. ಅದಕ್ಕೆ ರೂ. 3,000 ಖರ್ಚುಮಾಡಿದರು. ಮಹೇಶ್‌ರವರು ಎಲ್ಲಾ ಸರಕುಗಳನ್ನು ರೂ. 2,00,000ಗಳಿಗೆ ರಫ್ತು ಮಾಡಿದರು ಮತ್ತು ರೂ. 1,000 ವಿಮೆಗಾಗಿ ಪ್ರೀಮಿಯಮ್ ಕಟ್ಟಿದರು ಮತ್ತು ಕೆಲವು ಸರಕುಗಳು ನಾಶವಾದುದಕ್ಕೆ ರೂ. 8,000 ಗಳ ಪರಿಹಾರವಾಗಿ ವಿಮೆ ಕಂಪನಿಯಿಂದ ಪಡೆಯುತ್ತಾರೆ.

ಮಹೇಶ್‌ರವರು ಉಳಿದ ಬಾಕಿ ನಗದನ್ನು ರಾಜೇಶ್ ಮತ್ತು ಸತೀಶ್‌ರವರಿಗೆ ಪಾವತಿಸಿದರು.

a) ಮೇಮರೆಂಡಮ್ ಜಂಟಿ ಖಾತೆ

b) ಜಂಟಿ ವ್ಯಾಪಾರಸ್ಥರ ಖಾತೆಗಳನ್ನು ಬರೆಯಿರಿ.

10. ಬೆಂಗಳೂರಿನಲ್ಲಿ ಪ್ರಧಾನ ಕಛೇರಿಯಿರುವ ಒಂದು ಕಂಪನಿಯು ತನ್ನ ಕೋಲಾರ ಶಾಖೆಗೆ ಸರಕನ್ನು ಅಸಲಿನ ಮೇಲೆ ಶೇ. 20 ರಂತೆ ಸೇರಿಸಿದ ಮಾರಾಟ ಬೆಲೆಯಂತೆ ರವಾನಿಸುತ್ತದೆ. ಶಾಖೆಯ ಸ್ಥಳೀಯ ಖರೀದಿಗಳಿಗೆ ಪ್ರಧಾನ ಕಛೇರಿ ಹಣವನ್ನು ಸಂದಾಯ ಮಾಡುತ್ತದೆ. ಶಾಖೆಯ ದೈನಂದಿನ ವ್ಯವಹಾರಗಳಿಂದ ಗಳಿಸಿದ ಎಲ್ಲಾ ನಗದನ್ನು ಅಂದೇ ಪ್ರಧಾನ ಕಛೇರಿಗೆ ಕಳುಹಿಸತಕ್ಕದ್ದು. ಶಾಖೆಯ ಎಲ್ಲಾ ಖರ್ಚುಗಳನ್ನು ಪ್ರಧಾನ ಕಛೇರಿ ಕೊಡುತ್ತದೆ. ಈ ಕೆಳಗಿನ ಮಾಹಿತಿಯನ್ನು ಬಳಸಿ ಪ್ರಧಾನ ಕಛೇರಿ ಪುಸ್ತಕದಲ್ಲಿ ಕೋಲಾರ ಶಾಖೆಯ ಲೆಕ್ಕವನ್ನು ಬರೆಯಿರಿ.

| | |
|---|---|
| ಚಿಲ್ಲರೆ ನಗದು 01-01-2012 | ರೂ. 20,000 |
| 31-12-2012 | ರೂ. 18,500 |
| 01-01-2012 ರಂದು ಋಣಿಗಳು | ರೂ. 2,50,000 |
| <u>01-01-2012 ರಂದು ಸರಕು</u> | |
| ಪ್ರಧಾನ ಕಛೇರಿಯಿಂದ (Invoice Price) ಸ್ವೀಕರಿಸಿದ್ದು | ರೂ. 2,40,000 |
| ಶಾಖೆ ನೇರ ಖರೀದಿಸಿದ್ದು | ರೂ. 1,60,000 |
| ಒಟ್ಟು ಮಾರಾಟ | ರೂ. 17,50,000 |
| ನಗದು ಮಾರಾಟ | ರೂ. 4,50,000 |
| ಗಿರಾಕಿಗಳು ವಾಪಸ್ಸು ಮಾಡಿದ ಸರಕು | ರೂ. 30,000 |
| ನೇರ ಖರೀದಿ | ರೂ. 4,50,000 |
| ಪ್ರಧಾನ ಕಛೇರಿಯಿಂದ (Invoice Price) ಶಾಖೆ ಸ್ವೀಕರಿಸಿದ ಸರಕು | ರೂ. 6,00,000 |
| ಶಾಖೆಯ ಚಿಲ್ಲರೆ ಖರ್ಚಿಗಾಗಿ ಪ್ರಧಾನ ಕಛೇರಿ ಕಳುಹಿಸಿದ್ದು | ರೂ. 25,000 |
| ಕರಡು ಸಾಲ | ರೂ. 10,000 |
| ಋಣಿಗಳಿಗೆ ಕೊಟ್ಟ ಸೋಡಿ | ರೂ. 20,000 |
| ಗಿರಾಕಿಗಳಿಂದ ಸ್ವೀಕರಿಸಿದ ನಗದು | ರೂ. 12,50,000 |
| ಶಾಖೆಯ ಖರ್ಚುಗಳು | ರೂ. 3,00,000 |
| <u>31-12-2012 ರಲ್ಲಿ ಸರಕು</u> | |
| ಶಾಖೆ ನೇರವಾಗಿ ಖರೀದಿಸಿದ್ದು | ರೂ. 1,20,000 |
| ಪ್ರಧಾನ ಕಛೇರಿಯಿಂದ (Invoice Price) ರವಾನೆಯಾದದ್ದು | ರೂ. 1,80,000 |